9. ಮೇಲೆ ನಮೂದಿಸಲ್ಪಟ್ಟಿರುವ ಅಂಗಡಿಗಳಲ್ಲಿ ಚಿಲ್ಲರೆ ಬಿಕರಿ ಮಾಡುವದಕ್ಕೋಸ್ಕರವಾಗಿ ಗುತ್ತಿಗೆದಾರನಿಂದ ಇಡಲ್ಪಟ್ಟ ಜನಗಳಿಗೆ ಖಾರ್ಜಿನಿಂದ ನೇಮಕ ಮಾಡಲ್ಪಟ್ಟ ನಮೂನೆಯಲ್ಲಿ ಕೊಡಗು ಕಮಿಷನರವರಿಂದ ಮಂಜೂರ್ ಮತ್ತು ಕೌಂಟರ್‌ಸೈನ್ ಮಾಡಿ ಕೊಡೋಣಾದ ಲೈಸೆನ್ಸಗಳನ್ನು ಕೊಟ್ಟಿರತಕ್ಕದ್ದು.

10. ಮಾರುವದಕ್ಕೆ ಬೇಕಾಗುವ ಅಫೀಮನ್ನು ಕೊಡಗುದೇಕದ ಕಮಿಷನರವರ ಮೂಲಕ ಚೀಫ್ ಕಮಿಷನರವರು ಮೊ ಕರೂರ್ಮಾಡಿರುವ ಕ್ರಯ ಕೊಟ್ಟು ತರಿಸಿಕೊಳ್ಳಬೇಕು. ಕಂಟ್ರಾಕ್ಟು ವಾಯಿದೆ ಮುಗಿದ ಬಳಿಕ ಮೊದಲಿನ ಕಂಟ್ರಾಕ್ಟುದಾರನಲ್ಲಿ ಕರ್ಚಾಗದೆ ಬಾಕಿ ಇರುವಂಥಾ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದೆ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಎರಡು ತಿಂಗಳಿಗೆ ಬೇಕಾದಷ್ಟರಲ್ಲಿ ಕಮಿಷನರವರಿಂದ ತೀರ್ಮಾನಿಸಲ್ಪಡುವ ಖರೀದಿಗೆ ಮತ್ತು ಆವರಿಂದ ಎಷ್ಟೆಷ್ಟು ಎಂಬದಾಗಿ ನಿರ್ಣಯಿಸಲ್ಪಡುತ್ತದೋ ಅಷ್ಟಷ್ಟನ್ನು ಕೊಂಡುಕೊಳ್ಳತಕ್ಕದ್ದೆಂದು ಕಮಿಷನರವರಿಂದ ಅಪ್ಪಣೆ ಕೊಡಲ್ಪಟ್ಟರೆ ಕೊಂಡುಕೊಳ್ಳುವದಕ್ಕೆ ಹೊಸ ಕಂಟ್ರಾಕ್ಟುದಾರನು ಬದ್ಧನಾಗಿರಬೇಕು.

11. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲ್‌ಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ವಿಚಾರಿಸ್ಕೊಂಡು ತಿಳಿದುಕೊಳ್ಳಬಹುದು.

"ಹುಕ್ಕುಂ ಬಮೋಜೀಬ್"

ಆರ್. ಸಿ. ಎಚ್. ಎಂ. ಕಿಂಗ್,

ಚೀಫ್ ಕಮಿಷನರವರ ಸೆಕ್ರಿಟರಿಯವರು.

ಬೆಂಗಳೂರು–ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ, ಲಿಮಿಟೆಡ್.

ಸ್ 1895ನೇ ಇಸವಿಯ ಮೂರನೇ ನಂಬರು ರೆಗ್ಯುಲೇಷನ್ ಆದ ಮೈಸೂರ ಕಂಪನಿಸ್ ಆಕ್ಟು ಅನುಸರಿಸಿ ರಿಜಸ್ಟರ್ ಮಾಡಲ್ಪಟ್ಟಿದೆ.

ಇದರ ಬಂಡವಾಳ 5,00,000 ರೂಪಾಯಿಗಳು. ಷೇರು 1ಕ್ಕೆ 25 ರೂಪಾಯಿಗಳಂತೆ 20,000 ಷೇರುಗಳು. ಅಪ್ಲಿಕೇಷನ್‌ವೊಡನೆ 5 ರೂಪಾಯಿಗಳು, ಷೇರುಗಳು ಹಂಚಿದಕೂಡ್ಲೆ 5 ರೂಪಾಯಿಗಳು, ಬಾಕಿ 15 ರೂಪಾಯಿಗಳು ಕಾಲ್ ಬಂದಕ್ಕೆ 5 ರೂಪಾಯಿಗಳಂತೆ ಪಾವತಿ ಮಾಡತಕ್ಕದ್ದು.

ಕಂಪನಿಯ ಷೇರುಲಿಸ್ಟು ಸಿದ್ಧವಾಗಿರುವದು. ಹಣವು ಬೆಂಗಳೂರಿನಲ್ಲಿರುವ ಮದರಾಸ್ ಬ್ಯಾಂಕಿಗಾಗಲಿ ಅಥವಾ ಮ್ಯಾನೇಜಿಂಗ್ ಡೈರೆಕ್ಟರಿಗಾಗಲಿ ಕಳುಹಿಸಿ ರಸೀತಿ ಪಡೆಯಬಹುದು.

ಷೇರುಗಳು ಮೈಸೂರು ಸೀಮೆಯಲ್ಲಿ ವಾಸಮಾಡುವವರಿಗು ಮತ್ತು ಅನ್ಯದೇಶದಲ್ಲಿ ವಾಸಿಸುತ್ತಿರುವ ಈ ದೇಶಿಯರಿಗು ಕೊಡಲ್ಪಡುವದು. ಪ್ರಕಟನೆ ಪತ್ರಿಕೆಗಳು ಮತ್ತು ಇತರ ತಪಸೀಲುಗಳು ಸಹಾ ಇದರಿಂದ ಸೈ ಮಾಡಿರುವವರಿಂದ ತರಿಸಿಕೊಳ್ಳಬಹುದು.

ಏ ಸುಬ್ಬರಾವ್,

ಮ್ಯಾನೇಜಿಂಗ್ ಡೈರೆಕ್ಟರ್,

ಬೆಂಗಳೂರು–ಚಿಕ್ಕಬಳ್ಳಾಪುರ ಲೈಟ ರೈಲ್ವೆಕಂಪನಿ, ಲಿಮಿಟೆಡ್,

68ನೇ ನಂಬರು, 2ನೇ ಬೀದಿ, ಚಾಮರಾಜಪ್ಯಾಟೆ, ಬೆಂಗಳೂರು.